**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆ: 124/2022**

ದಿನಾಂಕ: 29.01.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. -6 ಅ.ಸಾ -4

| | | |
|---|---|---|
| ಹೆಸರು | : | ಶ್ರೀ.ಲಕ್ಷ್ಮೀ ನರಸಿಂಹಯ್ಯ |
| ತಂದೆಯ ಹೆಸರು | : | ನರಸಿಂಹಯ್ಯ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಟಕನಪಾಳ್ಯ |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಸುಮಾರು ಒಂದು ವರ್ಷದಿಂದ ಕಟಕನಪಾಳ್ಯ ಗ್ರಾಮದ ನನ್ನ ಸಹೋದರ ಮಾವ ಮುತ್ತ ನರಸಿಂಹಯ್ಯನ ಮನೆ ಬಳಿ ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಈಗ ನೋಡುತ್ತಿರುವ ಸಹಿ ಪೋಲಿಸರು ಮಾಡಿಸಿಕೊಂಡಿರುತ್ತಾರೆ. ಪೋಲಿಸರ ಜೊತೆ ಬೇರೆ ಯಾರು ಇರಲಿಲ್ಲ. ನಮ್ಮ ಊರಿನವರು ಯಾರೋ ಒಬ್ಬರು ಸತ್ತಿದ್ದು ಆ ವಿಷಯವಾಗಿ ಪೋಲಿಸರು ಅಲ್ಲಿಗೆ ಬಂದರು. ಬೇರೆ ಏನು ಮಾಡಿರುತ್ತಾರೆಂದು ನನಗೆ ಏನು ಗೊತ್ತಿಲ್ಲ. ಈ ಪ್ರಕರಣ ಕುರಿತು ಬೇರೆ ಏನು ಗೊತ್ತಿಲ್ಲ. ದಿನಾಂಕ 02.07.2022 ರ ಸ್ಥಳ ಪಂಚನಾಮೆಯನ್ನು ನಿಪಿ**-5** ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ**-5** ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಅಭಿಯೋಜಕರು ಕೋರಿರುತ್ತಾರೆ. ವಾದ ಆಲಿಸಿರುತ್ತದೆ. ಪ್ರಕರಣದ ಕಡತವನ್ನು ಪರಿಶೀಲಿಸಿದ್ದು ಸಾಕ್ಷಿ ನಿಪಿ-5 ರ ಪ್ರಕಾರ ಸಾಕ್ಷ್ಯ ಹೇಳದೇ ಇರುವುದು ಕಂಡುಬಂದಿದ್ದು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 02.07.2022 ರಂದು ಮಧ್ಯಾಹ್ನ 2.00 ರಿಂದ 3.00 ಗಂಟೆ ಸಮಯದಲ್ಲಿ ಕಟಕನಪಾಳ್ಯ ಗ್ರಾಮದ ಲೇಟ್ ಎಳವಯ್ಯನ ಮನೆ ಹಿಂಭಾಗದ ಖಾಲಿ ಜಾಗದಲ್ಲಿ ಸ್ಥಳ ಪಂಚನಾಮೆ ಮಾಡಿತ್ತು ನಾನು ನಿಪಿ-5 ಎ ಸಹಿ ಹಾಕಿದ್ದೆ ಎನ್ನುವುದು ಸರಿ ಅಲ್ಲ. ಪೋಲಿಸರು ತಮ್ಮೊಂದಿಗೆ ಮೂರು ಜನ ಆರೋಪಿಗಳನ್ನು ಕರೆ ತಂದಿದ್ದು ಅವರು ತಮ್ಮ ಹೇಳಿಕೆಯಲ್ಲಿ ಅಟ್ಟ @ ಬರಿಯಯ್ಯ ಎನ್ನುವವನ್ನು ಕೊಲೆ ಮಾಡಿದ್ದು ಕೊಲೆ ಮಾಡಿದ ಜಾಗ ತೋರಿಸುವುದಾಗಿ ಸ್ಥಳ ತೋರಿಸುವ ಸಮಯಕ್ಕೆ ನಮಗೆ ಪಂಚರಾಗುವಂತೆ ಕೋರಿದ್ದರು ಎನ್ನುವುದು ಸರಿ ಅಲ್ಲ. ಆರೋಪಿಗಳು ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿ ನಂತರ ನನ್ನ ಸಹಿ ಮಾಡಿಸಿಕೊಂಡಿದ್ದರು ಎನ್ನುವುದು ಸರಿ ಅಲ್ಲ. ಆರೋಪಿಗಳು ನಮ್ಮ ಊರಿನವರಾಗಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

**ಪಾಟೀ ಸವಾಲುಃ ಶ್ರೀ. ವಿಜಯ್ ಕುಮಾರ್ ಕೆ., ಸಿ.ಎಲ್.**

**ಎ.ಡಿ.ಸಿ ಆರೋಪಿ ಪರ ವಕೀಲರಿಂದಃ ಇಲ್ಲಃ**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.